ಇಂದು ದಿನಾಂಕ 09.01.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟಿ ಸವಾಲುಃ ಜೆಡಿಆರ್ ಪರ ಶ್ರೀ ಯುಡಿಡಿ ವಕೀಲರಿಂದ

1. ನನ್ನ ಆಸ್ತಿಯ ಸರ್ವೆ ನಂಬರ್ಃ 60, ಅದರ ವಿಸ್ತೀರ್ಣ 32 ಗುಂಟೆ ಇರುತ್ತದೆ. ಯಡಗೋಡಿರವರ ಆಸ್ತಿಯ ಸರ್ವೆ ನಂಬರ್ಃ 66, ಅದರ ವಿಸ್ತೀರ್ಣ 04 ಎಕರೆ, 15 ಗುಂಟೆ ಇರುತ್ತದೆ. ಸರ್ವೆ ನಂಬರ್ಃ 66 ಮತ್ತು 60 ರ ನಡುವೆ ಒಂದು ರಸ್ತೆ ಇದೆ ಎಂದು ಸೂಚಿಸುವುದು ಸರಿ. ಮದಗದ ಕೆರೆಯ ಕಾಲುವೆಯು ಸರ್ವೆ ನಂಬರ್ಃ 60 ಮತ್ತು 66 ರ ನಡುವೆ ಇರುವ ರಸ್ತೆಯ ಕೆಳಗಡೆ ಹಾದು ಹೋಗುತ್ತದೆ ಎಂದು ಸೂಚಿಸುವುದು ಸರಿ. ಸದರಿ ರಸ್ತೆಯನ್ನು ಸಾರ್ವಜನಿಕರು ಉಪಯೋಗ ಮಾಡುತ್ತಿದ್ದಾರೆ ಎಂದರೆ ಸರಿ. ಆ ಕಾರಣದಿಂದ ಡಿಕ್ರಿಯ ಆಸ್ತಿಯಲ್ಲಿ ತಂತಿ ಬೇಲಿ ಹಾಕಲು ಬರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಜಮೀನಿನಲ್ಲಿ ನಾನು ತಂತಿ ಬೇಲಿ ಹಾಕಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಜಮೀನಿನಲ್ಲಿರುವ ತಂತಿ ಬೇಲಿಯನ್ನು ಬೇರೆಯವರು ಬಂದು ತೆಗೆಯಲು ಸಾಧ್ಯವಿರುವುದಿಲ್ಲ.

2. ನಾನು ಸಲ್ಲಿಸಿರುವ ದರಖಾಸ್ತು ಅರ್ಜಿಯ ಮಾಹಿತಿ ನನಗೆ ಇದೆ. ನನ್ನ ಆಸ್ತಿಯಲ್ಲಿ ಈಗಲೂ ಸಹ ಇರುವ ತಂತಿ ಬೇಲಿಯನ್ನು ಯಡಗೋಡಿಯವರು ಹಾಕಿರುತ್ತಾರೆ. ಸದರಿ ತಂತಿಯನ್ನು ಈಗ್ಗೆ 4-5 ವರ್ಷಗಳ ಹಿಂದೆ ಹಾಕಿರುತ್ತಾರೆ, ಆದರೆ ನಿರ್ದಿಷ್ಟವಾಗಿ ಯಾವ ವರ್ಷ ಹಾಕಿರುತ್ತಾರೆ ಎಂದು ಹೇಳಲಾಗುವುದಿಲ್ಲ. ನನ್ನ ದರಖಾಸ್ತು ಅರ್ಜಿಯಲ್ಲಿ ತಂತಿ ಬೇಲಿ ಹಾಕಿದ ಬಗ್ಗೆ ನಮೂದಿಸಿದ್ದು, ಆದರೆ ಪ್ರಸ್ತುತ ನನಗೆ ನೆನಪಿರುವುದಿಲ್ಲ. ಸದರಿ ತಂತಿ ಬೇಲಿಯನ್ನು ಜೆಡಿಆರ್ 1ಬಿ, 1ಸಿ, 1ಇ, 2 ಬಿ, 2ಸಿ, 2ಡಿ ಇವರುಗಳು ಹಾಕಿರುತ್ತಾರೆ. ಜೆಡಿಆರ್ ನಂಬರ್ಃ 2ಸಿ ರವರಿಗೆ ಸುಮಾರು 25 ವರ್ಷ ವಯಸ್ಸು ಇರುತ್ತದೆ. ಜೆಡಿಆರ್ ನಂಬರ್ಃ 2ಡಿ ರವರಿಗೆ ಸುಮಾರು 22 ವರ್ಷ ವಯಸ್ಸು ಇರುತ್ತದೆ. ಮೇಲ್ಕಂಡ ಜೆಡಿಆರ್‌ರವರುಗಳೇ ತಂತಿಬೇಲಿಯನ್ನು ಹಾಕಿರುವ ಬಗ್ಗೆ ದಾಖಲಾತಿಗಳನ್ನು ಹಾಗೂ ಫೋಟೋ, ನೆಗೆಟಿವ್‌ಗಳನ್ನು ಸಲ್ಲಿಸಿರುತ್ತೇನೆ. ನಿಪಿ-3 ದಾಖಲಾತಿಯಲ್ಲಿ ತಂತಿ ಬೇಲಿಯನ್ನು ಹಾಕಿರುವ ಯಾವುದೇ ವ್ಯಕ್ತಿಗಳು ಇರುವುದಿಲ್ಲ ಎಂದು ಸೂಚಿಸುವುದು ಸರಿ.

3. ನಾನು ಈ ಮೊದಲು ಅಸಲು ದಾವೆಯನ್ನು ಪ್ರತಿವಾದಿಗಳು ಬೇಲಿಯನ್ನು ಮತ್ತು ಗಿಡಮರಗಳನ್ನು ಕಡಿದಿದ್ದಾರೆ ಎಂದು ಸಲ್ಲಿಸಿದ್ದೇನೆ ಎಂದು ಸೂಚಿಸುವುದು ಸರಿ. ಡಿಕ್ರಿ ಆಸ್ತಿಯಲ್ಲಿರುವ ತಂತಿ ಬೇಲಿಯು 1996 ನೇ ಇಸ್ವಿಯಿಂದಲೂ ಇದ್ದು, ಜೆಡಿಆರ್‌ರವರಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಜೆಡಿಆರ್‌ರವರು ತಂತಿಬೇಲಿ ಹಾಕುತ್ತಿರುವ ಬಗ್ಗೆ ಬಸವರಾಜ ಸುರವನ್ನಿರವರು ನನಗೆ ಮಾಹಿತಿ ನೀಡಿರುತ್ತಾರೆ. ಸದರಿ

ಬಸವರಾಜ ಸುರವನ್ನಿರವರು ಮಾಸೂರಿನಲ್ಲಿ ಟೈಲರಿಂಗ್ ಕೆಲಸ ಮಾಡಿಕೊಂಡಿದ್ದರು ಎಂದು ಸೂಚಿಸುವುದು ಸರಿ. ಸದರಿಯವರು ಮೂಲತಃ ಮಾಸೂರಿನವರು ಎಂದು ಸೂಚಿಸುವುದು ಸರಿಯಲ್ಲ. ಬಸವರಾಜ ಸುರವನ್ನಿರವರು ಕೋಡಮಗ್ಗಿ ಗ್ರಾಮಕ್ಕೆ ಬಂದು ಸುಮಾರು 40 ವರ್ಷಗಳು ಆಗಿರುತ್ತದೆ. ಸದರಿರವರು ಈಗಲೂ ಸಹ ಟೈಲರಿಂಗ್ ಕೆಲಸ ನಿರ್ವಹಿಸುತ್ತಿದ್ದಾರೆ. ಸದರಿ ಸುರವನ್ನಿರವರು ಕೋಡಮಗ್ಗಿ ಗ್ರಾಮಕ್ಕೆ ಬಂದು ಈಗ 2 ವರ್ಷ ಆಗಿದೆ ಎಂದು ಸೂಚಿಸುವುದು ಸರಿಯಲ್ಲ. ಬಸವರಾಜ ಸುರವನ್ನಿರವರು ಘಟನೆ ನಡೆದ ಕಾಲಕ್ಕೆ ಮಾಸೂರಿನಲ್ಲಿ ವಾಸವಿದ್ದರೂ ಸಹ ನನಗೆ ಅನುಕೂಲವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

4. ಜೆಡಿಆರ್ ನಂಬರ್ಃ 1ಬಿ, ಸಿ, ಡಿ ಮತ್ತು ಜೆಡಿಆರ್ಃ 2, ಬಿ, ಸಿ, ಡಿ ರವರುಗಳು ನನ್ನ ಹೊಲಕ್ಕೆ ಯಾವುದೇ ತಂತಿಬೇಲಿ ಹಾಕಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದ ಡಿಕ್ರಿ ಪ್ರಕಾರ ಅವರುಗಳು ಡಿಕ್ರಿ ಆಸ್ತಿಗೆ ಯಾವುದೇ ಅಡಚಣೆ ಮಾಡಿಲ್ಲ ಮತ್ತು ತಂತಿಬೇಲಿ ಹಾಕಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಡಿಕ್ರಿ ಆಸ್ತಿ ಸಂಬಂಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ವಿಲೆ ಇರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದರಖಾಸ್ತು ಅರ್ಜಿಯನ್ನು ದಾಖಲು ಮಾಡಲು ಯಾವುದೇ ಕಾರಣ ಉಂಟಾಗಿಲ್ಲ, ಜೆಡಿಆರ್‌ರವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ : ಶ್ರೀ ಪಿಎಫ್‌ಜೆ ವಕೀಲರಿಂದ

ನನಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಇರುವುದರ ಬಗ್ಗೆ ಇಂದಿನವರೆಗೂ ಸಹ ನನಗೆ ಯಾವುದೇ ನೋಟೀಸ್ ವಗೈರೆಗಳು ಬಂದಿರುವುದಿಲ್ಲ.

ಪಾಟೀ ಸವಾಲು ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.